# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 774 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 26.12.2022 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರಗಳು |
|---|---|---|
| (ಅ) | ಆಯುಷ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ದರ್ಜೆಯ ವೈದ್ಯಾಧಿಕಾರಿಗಳ ಮತ್ತು ತಜ್ಞ ವೈದ್ಯರುಗಳ ನಡುವೆ ಇರುವ ವ್ಯತ್ಯಾಸಗಳೇನು ಹಾಗೂ ಇವರುಗಳ ಕರ್ತವ್ಯ ಕಾರ್ಯವ್ಯಾಪ್ತಿ ಮತ್ತು ಜವಾಬ್ದಾರಿಗಳೇನು: (ಮಾಹಿತಿ ನೀಡುವುದು) | ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿ ತಜ್ಞ ವೈದ್ಯರುಗಳ ಕರ್ತವ್ಯ ಕಾರ್ಯವ್ಯಾಪ್ತಿ ಹಾಗೂ ಜವಾಬ್ದಾರಿಗಳು ಈ ಕೆಳಕಂಡಂತಿವೆ:<br><br>• ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಬರುವ ಒಳ ಹಾಗೂ ಹೊರ ರೋಗಿಗಳಿಗೆ ಸೂಕ್ತ ಚಿಕಿತ್ಸೆ ಒದಗಿಸುವುದು ಹಾಗೂ ಉಚಿತ ಔಷಧಿ ವಿತರಣೆ.<br>• ಐಇಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ನೆರವಾಗುವುದು.<br>• ರಾಷ್ಟ್ರೀಯ ಆಯುಷ್ ಅಭಿಯಾನದಡಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.<br>• ಆಯುಷ್ ಪದ್ಧತಿಯ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದು.<br>• ಅಂತರಾಷ್ಟ್ರೀಯ ಯೋಗ ದಿನಾಚರಣೆ ಹಾಗೂ ಇನ್ನಿತರ ಆಯುಷ್ ದಿನಾಚರಣೆಗಳಲ್ಲಿ ಭಾಗವಹಿಸುವುದು.<br>• ಉಚಿತ ಆರೋಗ್ಯ ತಪಾಸಣೆ, ಆಯುಷ್ ಸೇವಾಗ್ರಾಮ, ಮನೆಮದ್ದು ಹಾಗೂ ಇನ್ನಿತರೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.<br>• ವೈದ್ಯಾಧಿಕಾರಿಗಳು ಹಾಗೂ ಇತರೆ ಮೇಲಾಧಿಕಾರಿಗಳಿಂದ ಸೂಚಿಸಲ್ಪಡುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು. |
| (ಆ) | ಆಯುರ್ವೇದ ಚಿಕಿತ್ಸೆಯನ್ನು ಮನೆ ಮನೆಗೂ ತಲುಪಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇದರಲ್ಲಿ ತಜ್ಞ ವೈದ್ಯರುಗಳ ಹೊಣೆಗಾರಿಕೆಗಳೇನು: (ಮಾಹಿತಿನೀಡುವುದು) | ಆಯುರ್ವೇದ ಚಿಕಿತ್ಸೆಯನ್ನು ಮನೆ ಮನೆಗೂ ತಲುಪಿಸಲು ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿ ಒಟ್ಟು 49 ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ/ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗಿರುತ್ತದೆ.<br><br>ಸದರಿ ಮೇಲ್ದರ್ಜೆಗೇರಿಸಲಾದ ಚಿಕಿತ್ಸಾಲಯ/ಆಸ್ಪತ್ರೆಗಳಿಗೆ ತಲಾ 02 ತಜ್ಞ ವೈದ್ಯರುಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿ ಜನಸಾಮಾನ್ಯರಿಗೆ ಉಚಿತ ವೈದ್ಯಕೀಯ ಸೇವೆಯನ್ನು ನೀಡಲು ಕ್ರಮವಹಿಸಲಾಗಿದೆ.<br><br>ಸದರಿ ತಜ್ಞ ವೈದ್ಯರುಗಳ ಹೊಣೆಗಾರಿಕೆಗಳು ಈ ಕೆಳಕಂಡಂತಿವೆ.<br><br>• ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಬರುವ ಒಳ ಹಾಗೂ ಹೊರ ರೋಗಿಗಳಿಗೆ ಸೂಕ್ತ ಚಿಕಿತ್ಸೆ ಒದಗಿಸುವುದು ಹಾಗೂ ಉಚಿತ ಔಷಧಿ ವಿತರಣೆ.<br>• ಐಇಸಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.<br>• ರಾಷ್ಟ್ರೀಯ ಆಯುಷ್ ಅಭಿಯಾನದಡಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.<br>• ಉಚಿತ ಆರೋಗ್ಯ ತಪಾಸಣೆ, ಆಯುಷ್ ಸೇವಾಗ್ರಾಮ, ಮನೆಮದ್ದು ಹಾಗೂ ಇನ್ನಿತರೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.<br>• ವೈದ್ಯಾಧಿಕಾರಿಗಳು ಹಾಗೂ ಇತರೆ ಮೇಲಾಧಿಕಾರಿಗಳು ವಹಿಸುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು. |

| | | |
|---|---|---|
| (ಇ) | ಕಳೆದ ಹತ್ತು ವರ್ಷಗಳಿಂದ ಜಿಲ್ಲಾ ಹಾಗೂ ತಾಲ್ಲೂಕು ಆಯುಷ್ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ವಿಭಾಗವಾರು ತಜ್ಞ ವೈದ್ಯರುಗಳಿಂದ ಚಿಕಿತ್ಸೆಗಳು ಸಮರ್ಪಕವಾಗಿ ದೊರೆಯುತ್ತಿದೆಯೇ; ಹಾಗಿದ್ದಲ್ಲಿ, ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಮೇಲ್ದರ್ಜೆಗೇರಿಸಲಾದ ಆಯುರ್ವೇದ ಆಸ್ಪತ್ರೆಗಳಲ್ಲಿ ಈ ಕೆಳಗಿನ ತಜ್ಞ ವೈದ್ಯಕೀಯ ವಿಭಾಗಗಳು ಇರುತ್ತವೆ.<br>1. ಪಂಚಕರ್ಮ<br>2. ಕಾಯಚಿಕಿತ್ಸಾ,<br>3. ಶಾಲಕ್ಯ ತಂತ್ರ,<br>4. ಶಲ್ಯ ತಂತ್ರ<br><br>ಸಾರ್ವಜನಿಕರಿಗೆ ವಿಭಾಗವಾರು ತಜ್ಞ ವೈದ್ಯರ ಚಿಕಿತ್ಸೆ ಸಮರ್ಪಕವಾಗಿ ದೊರೆಯುವಂತೆ ಮಾಡಲು ಈ ತಜ್ಞ ವೈದ್ಯಕೀಯ ವಿಭಾಗಗಳಿಗೆ ಒದಗಿಸಲಾದ ಸಂಪನ್ಮೂಲಗಳ ಮಾಹಿತಿಯನ್ನು **ಅನುಬಂಧ-1ರಲ್ಲಿ** ಹಾಗೂ ಆಸ್ಪತ್ರೆಗಳಿಗೆ ಒದಗಿಸಿರುವ ಉಪಕರಣಗಳ ಮಾಹಿತಿಯನ್ನು **ಅನುಬಂಧ – 2ರಲ್ಲಿ** ನೀಡಲಾಗಿದೆ.<br><br>ಇದಲ್ಲದೇ, ಸದರಿ ಆಸ್ಪತ್ರೆಗಳಿಗೆ ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಇತರೆ ಮೂಲಭೂತ ಸೌಕರ್ಯಗಳಾದ ಕಟ್ಟಡ ನವೀಕರಣ, ಔಷಧಿಗಳು, ಪೀಠೋಪಕರಣಗಳು, ಸಾದಿಲ್ವಾರು ವೆಚ್ಚಗಳಿಗೆ ಅನುದಾನವನ್ನು ಒದಗಿಸಲಾಗುತ್ತಿದೆ. |
| (ಈ) | ಆಯುರ್ವೇದ ಅಂದರೆ ಕೇವಲ ಮನೆಮದ್ದು, ನಾಟಿ ಔಷಧಿಯನ್ನದೇ ಆಯುರ್ವೇದದಲ್ಲಿ ಇರುವಂತೆ ಇದರ ವಿವಿಧ ವಿಭಾಗಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಇದರಲ್ಲಿ ಇರುವ ವೈದ್ಯಕೀಯ ವಿಭಾಗಗಳು ಯಾವುವು? (ಮಾಹಿತಿ ನೀಡುವುದು) | ಆಯುರ್ವೇದ ಅಂದರೆ ಕೇವಲ ಮನೆಮದ್ದು ಮತ್ತು ನಾಟಿ ಔಷಧಿ ಅನ್ನದೆ ಆಯುರ್ವೇದ ಪದ್ಧತಿಯು ವೈಜ್ಞಾನಿಕ ಹಿನ್ನಲೆ ಹೊಂದಿದ್ದು, ಆಯುರ್ವೇದ ಆಸ್ಪತ್ರೆಗಳಲ್ಲಿ NAM, NHM ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಆಯುರ್ವೇದದ ವಿವಿಧ ವಿಭಾಗಗಳ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ವಿಶೇಷವಾಗಿ ಪಂಚಕರ್ಮ, ಕ್ಷಾರಸೂತ್ರ, ನೇತ್ರ ರೋಗ ವಿಭಾಗಗಳ ಅಭಿವೃದ್ಧಿ ಹಾಗೂ ಸಾಂಕ್ರಮಿಕವಲ್ಲದ ರೋಗಗಳನ್ನು (NCD) ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. |

**ಸಂಖ್ಯೆ: ಆಕುಕ 402 ಪಿಐಎಂ 2022**

**(ಡಾ : ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

# ಅನುಬಂಧ – 1

<table>
<tr><th>ಕ್ರ ಸಂ</th><th>ಜಿಲ್ಲೆ ಹೆಸರು</th><th>ತಾಲ್ಲೂಕು ಆಯುರ್ವೇದ ಆಸ್ಪತ್ರೆ</th><th>ಒಟ್ಟು ಒದಗಿಸಲಾದ ಮಾನವ ಸಂಪನ್ಮೂಲ (ಪ್ರತಿಆಸ್ಪತ್ರೆಗೆ)</th></tr>
<tr><td>1</td><td>ಉಡುಪಿ</td><td>ಸರ್ಕಾರಿ ತಾಲ್ಲೂಕು ಆಯುರ್ವೇದ ಆಸ್ಪತ್ರೆ, ಕುಂದಾಪುರ</td><td rowspan="9"><table>
<tr><td>ತಜ್ಞ ವೈದ್ಯರು</td><td>02</td></tr>
<tr><td>ಔಷಧಿ ವಿತರಕರು</td><td>01</td></tr>
<tr><td>ಮಸಾಜಿಸ್ಟ್</td><td>02</td></tr>
<tr><td>ಸ್ತ್ರೀ. ರೋಗ ಅಟೆಂಡರ್</td><td>01</td></tr>
<tr><td>ಕ್ಷಾ.ಸೂ. ಅಟೆಂಡರ್</td><td>01</td></tr>
<tr><td>ಮಲ್ಟಿಪರ್ಪಸ್ ವರ್ಕರ್</td><td>01</td></tr>
<tr><td>ಒಟ್ಟು</td><td>08</td></tr>
</table></td></tr>
<tr><td>2</td><td>ಕೊಪ್ಪಳ</td><td>ಸರ್ಕಾರಿ ತಾಲ್ಲೂಕು ಆಯುರ್ವೇದ ಆಸ್ಪತ್ರೆ, ಯಲಬುರ್ಗಾ</td></tr>
<tr><td>3</td><td>ಹಾಸನ</td><td>ಸರ್ಕಾರಿ ತಾಲ್ಲೂಕು ಆಯುರ್ವೇದ ಆಸ್ಪತ್ರೆ, ಅರಸೀಕೆರೆ</td></tr>
<tr><td>4</td><td>ಚಿತ್ರದುರ್ಗ</td><td>ಸರ್ಕಾರಿ ತಾಲ್ಲೂಕು ಆಯುರ್ವೇದ ಆಸ್ಪತ್ರೆ, ಹೊಸದುರ್ಗ</td></tr>
<tr><td>5</td><td>ದಕ್ಷಿಣಕನ್ನಡ</td><td>ಸರ್ಕಾರಿ ತಾಲ್ಲೂಕು ಆಯುರ್ವೇದ ಆಸ್ಪತ್ರೆ, ಉಳ್ಳಾಲ</td></tr>
<tr><td>6</td><td>ತುಮಕೂರು</td><td>ಸರ್ಕಾರಿತಾಲ್ಲೂಕುಆಯುರ್ವೇದಆಸ್ಪತ್ರೆ,ಮಧುಗಿರಿ</td></tr>
<tr><td>7</td><td>ಗದಗ</td><td>ಸರ್ಕಾರಿ ತಾಲ್ಲೂಕು ಆಯುರ್ವೇದ ಆಸ್ಪತ್ರೆ, ನರಗುಂದ</td></tr>
<tr><td>8</td><td>ದಾವಣಗೆರೆ</td><td>ಸರ್ಕಾರಿ ತಾಲ್ಲೂಕು ಆಯುರ್ವೇದ ಆಸ್ಪತ್ರೆ, ಚೆನ್ನಗಿರಿ</td></tr>
<tr><td>9</td><td>ಧಾರವಾಡ</td><td>ಸರ್ಕಾರಿ ತಾಲ್ಲೂಕು ಆಯುರ್ವೇದ ಆಸ್ಪತ್ರೆ, ಕಲಘಟಗಿ</td></tr>
</table>